


**ವರ್ಚಸ್ಸು ಎಲ್ಲಿ ಹೆಚ್ಚು?**

ಜ.24ರ 'ಸುಧಾ' ಮುಖಪುಟ ಲೇಖನ 'ಸಿನಿಮಾ ತಾರೆಯರ ರಾಜಕೀಯ'ದಲ್ಲಿ ಡಿ.ಕೆ.ರಮೇಶ್, ಚಿತ್ರರಂಗ ಮತ್ತು ರಾಜಕಾರಣದ ಸಂಬಂಧವನ್ನು ಅವಲೋಕನ ಮಾಡಿದ್ದಾರೆ. ಕೆಲವು ನಟ ನಟಿಯರು ಸಿನಿಮಾದ ವರ್ಚಸ್ಸು ಕಡಿಮೆಯಾದೊಡನೆ ರಾಜಕೀಯಕ್ಕಿಳಿದು ಪ್ರಚಾರಪ್ರಿಯರಾಗುವುದನ್ನು ವಿಶದವಾಗಿ ಹೇಳಿದ್ದಾರೆ.

-ಎಸ್.ಲಕ್ಷ್ಮೀನರಸಿಂಹ, ಚಾಮರಾಜನಗರ/ ಸು.ವಿಜಯಲಕ್ಷ್ಮಿ, ಶಿವಮೊಗ್ಗ/ ಕೋಟೇಶ್ವರ ಸೂರ್ಯನಾರಾಯಣ ರಾವ್, ಬೆಂಗಳೂರು/ ಡಾ.ಕೆ.ವಿ.ಸಂತೋಷ್, ಹೊಳಲ್ಕೆರೆ

**ಚಿತ್ರರಂಗ ಅಲ್ಲ, ರಾಜಕೀಯ**

ಪುಟ 26ರಲ್ಲಿ ಒಂದು ಕಡೆ 'ವರನಟ ಡಾ.ರಾಜ್ ಕುಮಾರ್ ಅವರು ಚಿತ್ರರಂಗಕ್ಕೆ ಧುಮುಕಿದ್ದರೆ ಕತೆ ಬೇರೆಯೇ ಇತ್ತು' ಎಂದು ಬರೆಯಲಾಗಿದೆ. ಆದರೆ 'ಡಾ.ರಾಜ್ ರಾಜಕೀಯಕ್ಕೆ ಧುಮುಕಿದ್ದರೆ ಕತೆಯೇ ಬೇರೆ ಇರುತ್ತಿತ್ತು' ಎಂದು ಆಗಬೇಕಿತ್ತಲ್ಲವೆ?

-ಎನ್.ರಾಮಕೃಷ್ಣ ಹೊಳ್ಳ, ಬೆಂಗಳೂರು

**ಶಿವನಿಗೆ ಪರಮ ನಿಷ್ಠ**

ಇಂದಿನ ನಮ್ಮ ಕೆಲವು ಸಾಹಿತಿಗಳು ಸನ್ಮಾನ ಪದವಿಗಳಿಗಾಗಿ ರಾಜಕಾರಣಿಗಳಿಗೆ ತಮ್ಮನ್ನು ತಾವು ಮಾರಿಕೊಳ್ಳುವುದನ್ನು ನೋಡಿದಾಗ, ಶಿವನಿಗಾಗಿ, ಶಿವಶರಣರಿಗಾಗಿ ತನ್ನ ನಾಲಗೆ ಮಾರಿಕೊಂಡ ಹರಿಹರ ಮಹಾಕವಿ ಎಷ್ಟು ದೊಡ್ಡ ವ್ಯಕ್ತಿ ಎಂದು ಶಿಕಾಕು ಅವರ 'ನಾಲಗೆಯಂ ಮಾರಿದೆಂ' ವಿಚಾರ ಲಹರಿ ಓದಿದಾಗ ಅನಿಸಿತು. 'ಏಣಾದಿನಾಥನ ರಗಳೆ' ಓದಿದ ಕೆಲವರು ಹರಿಹರ ಅನ್ಯಮತ ವಿರೋಧಿ ಹಾಗೂ ಉಗ್ರ ಮೂಲಭೂತವಾದಿ ಎಂದೆಲ್ಲ ವಿಶ್ಲೇಷಿಸಿದ್ದಾರೆ! ಆದರೆ ಹಾಗೆ ವಿರೋಧಿಸಲಿಕ್ಕೆ ಹರಿಹರನಿಗೆ ಆಗ ಯಾವ ಅನ್ಯಮತವೂ ಇರಲಿಲ್ಲ. ಆತ ಶಿವನಿಗೆ ಪರಮನಿಷ್ಠನಾಗಿದ್ದವ- ಅಷ್ಟೆ.

-ಕೊಹಿಮು, ಬಸರಕೋಡು

**ಕಣ್ಣಿಗೆ ಹಬ್ಬ**

'ರೊಮ್ಯಾಂಟಿಕ್ ಮಾಲ್ಡೀವ್ಸ್' (ವಿ.ಪ್ರದೀಪ ಕುಮಾರ್) ಕಣ್ಣಿಗೆ ಹಬ್ಬವುಂಟು ಮಾಡುವಂತೆ ಮೂಡಿಬಂದಿದೆ.

-ನೆ.ಲ.ರಾಂ., ಬೆಂಗಳೂರು/ ನೇ.ಗೋ.ಭ., ಕುಕ್ಕೆ ಸುಬ್ರಹ್ಮಣ್ಯ

**ಸಮಯೋಚಿತ ಸಲಹೆ**

ಗ್ರಾಹಕರು ಎಷ್ಟೇ ಹುಶಾರಾಗಿದ್ದರೂ ಮೋಸ ಹೋಗುವ ಸಾಧ್ಯತೆಯನ್ನು 'ಸೈಬರ್ ವಂಚಕರಿದ್ದಾರೆ, ಎಚ್ಚರ!' ಪ್ರಕಾಶ್ ನಡಹಳ್ಳಿ ಲೇಖನ ಬಿಂಬಿಸಿದೆ. ಸಲಹೆಗಳು ಸಮಯೋಚಿತವಾಗಿವೆ.

-ಬಾಳ್ನುಪೇಟೆ ನೀಲಕಂಠಪ್ಪ, ಹಾಸನ

**ವಿಚಾರಪೂರ್ಣ 'ಸ್ವರ್ಣಬಿಂದು'**

'ಮಕ್ಕಳ ಬೆಳವಣಿಗೆಗೆ ಸ್ವರ್ಣ ಬಿಂದು' ಉಮಾ ಅನಂತ್ ಲೇಖನ ವಿಚಾರಪೂರ್ಣವಾಗಿತ್ತು.

-ರವೀಂದ್ರನಾಥ ಶಿ. ಯಡಹಳ್ಳಿ, ಬೀಳಗಿ

**ಕಥೆ ಲಾಯ್ಕಿತ್ತ್ ಮಾರಾಯ್ರೇ**

ಫಕೀರ್ ಮುಹಮ್ಮದ್ ಕಟ್ಪಾಡಿಯವರ ಕಥೆ 'ಬಾಬಾ ಸಾಹೇಬರ ಓಕುಳಿ' ಬಾಳಾ ಲಾಯ್ಕಿತ್ತ್ ಮಾರಾಯ್ರೇ... ಬಾಬಾ ಸಾಹೇಬರಂತಹ ಉದಾತ್ತ ವ್ಯಕ್ತಿತ್ವ ಹೊಂದಿದವರು ಅಂದಿನ ದಿನಗಳಲ್ಲಿ ಎಲ್ಲಾ ಊರುಗಳಲ್ಲಿ ಇರುತ್ತಿದ್ದರು. ಭಾವೈಕ್ಯದ ಬೀಜವಾದ ಹಮಾಲಿ ಬಾಬಾ ಸಾಹೇಬರನ್ನು ಹೃದಯಸ್ಪರ್ಶಿಯಾಗಿ ಚಿತ್ರಿಸಿದ್ದಾರೆ.

-ಸರಸ ಬಿ. ಕೃಷ್ಣ, ಕಮ್ಮರಡಿ/ ಎಚ್.ಎಂ.ಪತ್ರೇಶ್, ಹಗರಿಬೊಮ್ಮನಹಳ್ಳಿ/ಬಿ.ಸಿದ್ದಲಿಂಗಪ್ಪ, ರೇಣುಕಾ ಪಾಟೀಲ, ದಾವಣಗೆರೆ

**ತುಳುವರ ಪಾಲೆ ಮರ!**

'ಹಾಲೆ ಮರದ ಪೋಲಿ ಪುರಾಣ' ಲೇಖನದಲ್ಲಿ ಮಲ್ಲಿಕಾರ್ಜುನ ಹೊಸಪಾಳ್ಯ ಪ್ರಸ್ತಾಪಿಸಿರುವ ಹಾಲೆ ಮರದ ವೈಜ್ಞಾನಿಕ ಹೆಸರು ರೈಟಿಯ ಟಿಂಕ್ಟೋರಿಯ. ಫೆಬ್ರವರಿಯಿಂದ ಮೇವರೆಗೆ ಇದು ಸುವಾಸನಾಭರಿತ ಹೂಗಳನ್ನು ಉತ್ಪಾದಿಸುತ್ತದೆ. ಕನ್ನಡದಲ್ಲಿ ಈ ಮರವನ್ನು ಬೆಪ್ಪಾಲೆ, ಕೋಡುಮುರ್ಕ ಎಂತಲೂ ಕರೆಯುತ್ತಾರೆ. ಈ ಗಿಡದ ಎಲೆಗಳಲ್ಲಿ ಕ್ಯಾನ್ಸರ್ ಕಣಗಳನ್ನು ನಾಶಮಾಡುವ ರಸಾಯನಿಕಗಳಿವೆ.

ಆದರೆ ಕರಾವಳಿಯ ತುಳು ಸಂಸ್ಕೃತಿಯಲ್ಲಿ ಉಪಯೋಗ ಮಾಡುವ ಹಾಲೆಮರದ ಮದ್ದು ಇದಲ್ಲ. ಕರಾವಳಿಯಲ್ಲಿ ಕೊಡಲಾಗುವ ಆಟಿ ಮದ್ದಿನಗಿಡ ವೈಜ್ಞಾನಿಕವಾಗಿ ಆಲ್ಸ್ಟೋನಿಯಾ ಸ್ಕೋಲಾರಿಸ್. ಅದನ್ನು ಕನ್ನಡದಲ್ಲಿ ಸಪ್ತಪರ್ಣಿ, ಮದ್ದಾಲೆ, ಹಾಲೆ ಎಂದು ಕರೆಯುತ್ತಾರೆ. ಅದೇ ತುಳುವರ ಪಾಲೆಮರ! ಈ ಮರದ ಹೂಗಳು ಬಿಳಿ. ಸುವಾಸನೆಯೂ ಅಪಾರ. ಅಕ್ಟೋಬರ್‌ನಿಂದ ಡಿಸೆಂಬರ್‌ವರೆಗೆ ಈ ಮರ ಹೂ ಬಿಡುತ್ತದೆ.

ಆಟಿ ಅಮಾವಾಸ್ಯೆಗೆ ಈ ಮರದ ಕಾಂಡದ ತೊಗಟೆಯನ್ನು ಲೇಖಕರು ಲೇಖನದಲ್ಲಿ ಹೇಳಿರುವ ಕ್ರಮದಲ್ಲಿ ಸಂಗ್ರಹಿಸಲಾಗುತ್ತದೆ. ನಂತರ ಇದರ ಕಷಾಯ ತಯಾರಿಸಿ ಆಟಿಮದ್ದು ಎಂದು ಕೊಡಲಾಗುತ್ತದೆ. ಇದರಲ್ಲಿ ಡೈಟಮಿನ್, ಎಕಿಟೆನಿನ್, ಎಕಿಟಾಮೈನ್ ಎಂಬ ರಸಾಯನಿಕಗಳಿದ್ದು, ಇವು ಎಲ್ಲಾ ರೀತಿಯ ಜ್ವರ, ಮಲೇರಿಯಾ ಬಾರದಂತೆ ನಿರೋಧಕತೆ ಹೆಚ್ಚಿಸುತ್ತದೆ. ಈ ರಸಾಯನಿಕಗಳನ್ನು ಕ್ವಿನೈನಿಗೆ ಪರ್ಯಾಯವಾಗಿ ಬಳಸಲಾಗುತ್ತದೆ. ಮರದ ತೊಗಟೆಯ ರಸವನ್ನು ಕಾಲರಾ ಚಿಕಿತ್ಸೆಯಲ್ಲೂ ಬಳಕೆಯಾದ ಉಲ್ಲೇಖಗಳಿವೆ.

-ಡಾ. ಆರ್. ಪರಿಮಳ, ಧಾರವಾಡ

**ಚೆನ್ನಾಗಿತ್ತು, ಆದರೆ ಸದಭಿರುಚಿಯಲ್ಲ**

'ಹಾಲೆ ಮರದ ಪೋಲಿ ಪುರಾಣ' ಲೇಖನ ಚೆನ್ನಾಗಿತ್ತು. ಆದರೆ ನಿರೂಪಣೆ ಮತ್ತು ಭಾಷಾ ಶೈಲಿ ಸದಭಿರುಚಿಯಿಂದ ಕೂಡಿರಲಿಲ್ಲ.

-ಡಾ.ಎಚ್.ಎಸ್.ಪ್ರೇಮಾ, ಬೆಂಗಳೂರು

ಕರ್ನಾಟಕ ಬ್ಯಾಂಕ್‌ನ
ಗೋಲ್ಡ್ ಲೋನ್
(ಚಿನ್ನಾಭರಣ ಸಾಲ)
ಕಡಿಮೆ ಚಿನ್ನ ಅಧಿಕ ಸಾಲ

ಕೃಷಿಕರಿಗೆ "ಅಗ್ರಿ ಗೋಲ್ಡ್"
ಕ್ಷಿಪ್ರ ಮಂಜೂರಾತಿ
ಜನಪ್ರಿಯವಾಗುತ್ತಿರುವ ಓವರ್‌ಡ್ರಾಫ್ಟ್ ಸೌಲಭ್ಯ
ಏಕ ಕಂತಿನ ಮರುಪಾವತಿ ಸೌಲಭ್ಯ
ಕಡಿಮೆ ಬಡ್ಡಿದರ
ಹೆಚ್ಚಿನ ಮಾಹಿತಿಗಾಗಿ ಟೋಲ್ ಫ್ರೀ ಸಂಖ್ಯೆ 1800 425 1444ಗೆ ಕರೆ ಮಾಡಿ ಅಥವಾ ನಿಮ್ಮ ಸಮೀಪದ ಶಾಖೆಯನ್ನು ಸಂಪರ್ಕಿಸಿ
ಷರತ್ತುಗಳು ಅನ್ವಯಿಸುತ್ತವೆ.
ಕರ್ನಾಟಕ ಬ್ಯಾಂಕ್ ಲಿ.
ನಿಮ್ಮ ಕುಟುಂಬದ ಬ್ಯಾಂಕ್, ಭಾರತದಾದ್ಯಂತ.
ನೋಂದಾಯಿತ ಹಾಗೂ ಪ್ರಧಾನ ಕಚೇರಿ: ಮಂಗಳೂರು - 575 002 ಇಮೇಲ್: info@ktkbank.com ವೆಬ್‌ಸೈಟ್: www.karnatakabank.com